


# ಮಕ್ಕಳ ಉಚಿತ
# ಮತ್ತು
# ಕಡ್ಡಾಯ ಶಿಕ್ಷಣ ಕಾಯಿದೆ-2009ರ
# ಪರಿಣಾಮಕಾರಿ ಅನುಷ್ಠಾನಕ್ಕಾಗಿ
# ಮಾಹಿತಿ ಪತ್ರ

ಪಡಿ PADI

EDUCATION FOR HUMANE SOCIETY

www.padivalored.com

# ಆರ್.ಟಿ.ಇ ಕಾಯಿದೆ ಕುರಿತು ಸಂಕ್ಷಿಪ್ತ ಮಾಹಿತಿ ಪತ್ರ

ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ನೀಡುವಂತೆ ಭಾರತದ ಸಂವಿಧಾನವು ದೇಶದ ಸರಕಾರಕ್ಕೆ ಜವಾಬ್ದಾರಿಯನ್ನಾಗಿಸಿದೆ, ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿಸಿ ಉಚಿತವಾಗಿ ಮತ್ತು ಕಡ್ಡಾಯವಾಗಿ ನೀಡಲು ಶಿಕ್ಷಣ ಹಕ್ಕು ಕಾಯಿದೆ 2009 ಜಾರಿಗೊಳಿಸಿರುವುದರಿಂದ ಅನೇಕ ಬಾಲಕಾರ್ಮಿಕ ಹಾಗೂ ಶಿಕ್ಷಣ ವಂಚಿತ ಮಕ್ಕಳ ಪಾಲಿಗೆ ವರದಾನವಾಗಿದೆ.

ಶಿಕ್ಷಣದ ಸಾರ್ವತ್ರೀಕರಣ ಸಾಧಿಸಲು ಸರ್ವ ಶಿಕ್ಷಣ ಅಭಿಯಾನ ಯೋಜನೆಯನ್ನು 2001–2002ರಲ್ಲಿ ಪ್ರಾರಂಭಿಸಲಾಗಿತ್ತು. ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ ಭಾರತದ ಸಂಸತ್ತಿನಿಂದ ಮಾಡಲ್ಪಟ್ಟಿರುವ ಕಾನೂನು. ಈ ಕಾಯ್ದೆಯಡಿ ಭಾರತದಲ್ಲಿ 6 ರಿಂದ 14 ವರ್ಷದವರೆಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ದೊರಕುವಂತೆ ಹಕ್ಕನ್ನು ನೀಡಲಾಗಿದೆ. ಈ ಕಾಯ್ದೆಯನ್ನು ಭಾರತ ಸಂವಿಧಾನದ 21a ಕಲಂ ನಡಿ ಜಾರಿಗೊಳಿಸಲಾಗಿದೆ.

ಶಿಕ್ಷಣ ಹಕ್ಕು ಕಾಯಿದೆಯನ್ನು ಸಮರ್ಪಕವಾಗಿ ಅನುಷ್ಠಾನ ಮಾಡುವ ನಿಟ್ಟಿನಲ್ಲಿ ಸ್ಥಳೀಯ ಸರಕಾರ ಮತ್ತು ಸಮುದಾಯದ ಪಾತ್ರ ಪ್ರಮುಖವಾಗಿದೆ. ಸ್ಥಳೀಯ ಸರಕಾರ, ಸಮುದಾಯ ಮತ್ತು ಸಮುದಾಯಾಧಾರಿತ ಸಂಸ್ಥೆಗಳು ಶಿಕ್ಷಣ ಹಕ್ಕು ಕಾಯಿದೆಯನ್ನು ಅರಿತು ಕೊಂಡರೆ, ಆ ಗ್ರಾಮದಲ್ಲಿರುವ ಎಲ್ಲಾ ಮಕ್ಕಳು ಶಿಕ್ಷಣ ಹಕ್ಕು ಕಾಯಿದೆಯಲ್ಲಿರುವ ಸೌಲಭ್ಯಗಳನ್ನು ಪಡೆದುಕೊಳ್ಳುವುದಲ್ಲದೆ, ಉತ್ತಮ ಗುಣಮಟ್ಟದ ಶಿಕ್ಷಣವನ್ನು ಪಡೆಯಲು ಸಾಧ್ಯ.

ಮಗುವನ್ನು ಉತ್ತಮ ಹಾಗೂ ಜವಾಬ್ದಾರಿಯುತ ನಾಗರಿಕರನ್ನಾಗಿ ಮಾಡುವಲ್ಲಿ ಸ್ಥಳೀಯ ಸರಕಾರ, ಸಮುದಾಯ ಮತ್ತು ಸಮುದಾಯಾಧಾರಿತ ಸಂಸ್ಥೆಗಳ ಪಾತ್ರ ಮಹತ್ವದ್ದಾಗಿದೆ.

ಶಿಕ್ಷಣ ಹಕ್ಕು ಕಾಯಿದೆ –2009ರ ಸಮರ್ಪಕವಾಗಿ ಅನುಷ್ಠಾನವಾಗದಿರುವುದರಿಂದ ಮತ್ತು ಈ ಕುರಿತು ಸಮುದಾಯ ಮತ್ತು ಸ್ಥಳೀಯ ಸರಕಾರಗಳಿಗೆ ಅರಿವಿನ ಅಗತ್ಯತೆ ಇದೆ ಮತ್ತು ಇನ್ನೂ ಸಾಕಷ್ಟು ಮಕ್ಕಳು ಶಾಲೆಯಿಂದ ಹೊರಗಿರುವುದನ್ನು ನಾವು ಕಾಣಬಹುದು. ಈ ಸಮಸ್ಯೆಯನ್ನು ಬಗೆಹರಿಸಲು ಸ್ಥಳೀಯ ಸರಕಾರ ಸಮುದಾಯಗಳಿಗೆ ಶಿಕ್ಷಣ ಹಕ್ಕು ಕಾಯಿದೆ – 2009ರ ಪ್ರಯೋಜನಗಳ ಕುರಿತು ಅರಿವು ಮೂಡಿಸುವ ಅಗತ್ಯವಿದೆ. ಅಲ್ಲದೆ ವಾರ್ಡ್‌ಸಭೆ ಮತ್ತು ಗ್ರಾಮ ಸಭೆಗಳಲ್ಲಿ ಈ ವಿಷಯದ ಕುರಿತು ಚರ್ಚಿಸುವುದರೊಂದಿಗೆ, ಶಿಕ್ಷಣ ಹಕ್ಕು ಕಾಯಿದೆಯ ಪರಿಣಾಮಕಾರಿ ಅನುಷ್ಠಾನ ಮಾಡುವಲ್ಲಿ ಸ್ಥಳೀಯ ಸರಕಾರ ಮುತುವರ್ಜಿ ವಹಿಸಬೇಕಾಗಿದೆ.

## ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕಿನ ಕಾಯಿದೆ –2009ರ ಮುಖ್ಯಾಂಶಗಳು

**ಸೆಕ್ಷನ್ 1 : ಕಿರು ಶೀರ್ಷಿಕೆ, ವ್ಯಾಪ್ತಿ ಮತ್ತು ಆರಂಭ**

2ಬಿ" ಮಗು ಎಂದರೆ 6 ರಿಂದ 14 ವರ್ಷದೊಳಗಿನ ಗಂಡು ಅಥವಾ ಹೆಣ್ಣು ಮಗು

2(f)" ಎಲಿಮೆಂಟರಿ ಶಿಕ್ಷಣ" ಎಂದರೆ 1ನೇ ತರಗತಿಯಿಂದ 8ನೇ ತರಗತಿಯವರೆಗಿನ ಶಿಕ್ಷಣ.

2(h) " ಸ್ಥಳೀಯ ಸರಕಾರ" ಎಂದರೆ ಯಾವುದೇ ನಗರ, ಪಟ್ಟಣ ಅಥವಾ ಹಳ್ಳಿಯ ಸ್ಥಳೀಯ ಆಡಳಿತ ನೋಡಿಕೊಳ್ಳುವ ಮುನ್ಸಿಪಲ್ ನಗರಸಭೆ ಅಥವಾ ಮುನ್ಸಿಪಲ್ ಪುರಸಭೆ ಅಥವಾ ಜಿಲ್ಲಾ ಪರಿಷತ್ ಅಥವಾ ನಗರ ಪಂಚಾಯತ್ ಅಥವಾ ಪಂಚಾಯಿತಿ ಅಥವಾ ಇನ್ನಾವುದೇ ಹೆಸರಿನಿಂದ ಕರೆಯಲ್ಪಟ್ಟ ಆಡಳಿತ ವ್ಯವಸ್ಥೆ.

2(l) "ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ರಾಷ್ಟ್ರೀಯ ಆಯೋಗ" ಎಂದರೆ ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ರಾಷ್ಟ್ರೀಯ ಆಯೋಗಗಳು ಕಾಯಿದೆ 2005ರ ಸೆಕ್ಷನ್ 3ರಂತೆ ರಚಿತವಾಗಿರುವ ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ರಾಷ್ಟ್ರೀಯ ಆಯೋಗ.

**ಸೆಕ್ಷನ್ 3 : ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು**

6 ವರ್ಷ ದಾಟಿದ ಯಾವುದಾದರೂ ಮಗುವನ್ನು ಶಾಲೆಗೆ ಸೇರಿಸದಿದ್ದಲ್ಲಿ ಅಥವಾ ಶಾಲೆಗೆ ಸೇರಿಸಿದ್ದರೂ

ಆ ಮಗುವಿಗೆ ಎಲಿಮೆಂಟರಿ ಶಿಕ್ಷಣವನ್ನು ಪೂರ್ಣಗೊಳಿಸಲಾಗದಿದ್ದ ಸಮಯದಲ್ಲಿ ಅಂತಹ ಮಗುವನ್ನು ವಯಸ್ಸಿಗೆ ಸೂಕ್ತವಾದ ತರಗತಿಗೆ ಸೇರಿಸಬೇಕು.

ಆದರೆ ಹೀಗೆ ಯಾವುದಾದರೂ ಮಗುವನ್ನು ನೇರವಾಗಿ ವಯಸ್ಸಿಗೆ ಅನುಗುಣವಾಗಿ ತರಗತಿಗೆ ಸೇರಿಸಿದ್ದ ಪಕ್ಷದಲ್ಲಿ, ಆ ಮಗುವನ್ನು ತನ್ನ ವಾರಿಗೆಯವರೊಂದಿಗೆ ಸಮಾನತೆ ಸಾಧಿಸಲು ನೆರವಾಗಲು ವಿಶೇಷವಾದ ತರಬೇತಿಯನ್ನು ನಿರ್ದಿಷ್ಟ ಸಮಯದಲ್ಲಿ ಹೊಂದುವಂತೆ ಶಿಫಾರಸ್ಸು ಮಾಡಬಹುದು.

**ಸೆಕ್ಷನ್ 5: ಬೇರೆ ಶಾಲೆಗೆ ವರ್ಗಾವಣೆ ಹೊಂದುವ ಹಕ್ಕು**

5(1) ಯಾವುದಾದರೂ ಶಾಲೆಯಲ್ಲಿ ಮಕ್ಕಳಿಗೆ ಎಲಿಮೆಂಟರಿ ಶಿಕ್ಷಣವನ್ನು ಪೂರ್ಣಗೊಳಿಸಲು ಅವಕಾಶಗಳು ಇಲ್ಲದಿದ್ದ ಪಕ್ಷದಲ್ಲಿ ಸೆಕ್ಷನ್ (೦) ರ ಉಪ-ಕ್ಲಾಸ್ (3) ಮತ್ತು(4) ರಲ್ಲಿ ಸೂಚಿಸಿರುವ ಶಾಲೆಗಳನ್ನು ಹೊರತುಪಡಿಸಿ ಇತರ ಶಾಲೆಗಳಿಗೆ ವರ್ಗಾವಣೆ ಹೊಂದಿ ತನ್ನ ಶಿಕ್ಷಣವನ್ನು ಮುಂದುವರಿಸಿ ಪ್ರಾಥಮಿಕ ಶಿಕ್ಷಣವನ್ನು ಪೂರೈಸುವ ಹಕ್ಕನ್ನು ಮಕ್ಕಳು ಹೊಂದಿರುತ್ತಾರೆ.

**ಸೆಕ್ಷನ್ 6: ಶಾಲೆ ಸ್ಥಾಪಿಸಲು ಸಮುಚಿತ ಮತ್ತು ಸ್ಥಳೀಯ ಸರಕಾರದ ಜವಾಬ್ದಾರಿ**

ಈ ಕಾಯಿದೆಯಲ್ಲಿರುವ ಅವಕಾಶಗಳನ್ನು ಜಾರಿ ಮಾಡಲು ನೆರೆಹೊರೆಯಲ್ಲಿ ಶಾಲೆಗಳು ಇಲ್ಲದಿದ್ದ ಪಕ್ಷದಲ್ಲಿ ಈ ಕಾಯಿದೆಯು ಜಾರಿಯಾದ 3 ವರ್ಷಗಳಲ್ಲಿ ಸೂಕ್ತ ಸರಕಾರಗಳು ಅಥವಾ ಸ್ಥಳೀಯ ಸರಕಾರಗಳು ಈ ಕಾಯಿದೆಯಲ್ಲಿ ನಿರ್ದಿಷ್ಟವಾಗಿ ಸೂಚಿಸಿರಬಹುದಾದ ರೀತಿಯಲ್ಲಿ ಶಾಲೆಯನ್ನು ಆರಂಭಿಸಬೇಕು.

**ಸೆಕ್ಷನ್ 7: ಸಂಪನ್ಮೂಲಗಳನ್ನು ಹಂಚಿಕೊಳ್ಳುವುದು ಮತ್ತಿತರ ಜವಾಬ್ದಾರಿಗಳು**

(1) ಈ ಕಾಯಿದೆಯಲ್ಲಿರುವ ಅವಕಾಶಗಳನ್ನು ಜಾರಿ ಮಾಡುವ ಜವಾಬ್ದಾರಿಯನ್ನು ನಿರ್ವಹಿಸಲು ಬೇಕಾದ ಹಣಕಾಸುಗಳನ್ನು ಒದಗಿಸಲು ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ಸಮಾನವಾದ ಜವಾಬ್ದಾರಿ ಇರುತ್ತದೆ.

**ಸೆಕ್ಷನ್ 8: ಸಮುಚಿತ ಸರಕಾರದ ಜವಾಬ್ದಾರಿಗಳು**

ಎ) ಪ್ರತಿಯೊಂದು ಮಗುವಿಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವುದು.

ವಿವರಣೆ – ಉಚಿತ ಶಿಕ್ಷಣವೆಂದರೆ ಸಂಬಂಧಿತ ಸರಕಾರಕ್ಕೆ:

1. 6ರಿಂದ 14 ವರ್ಷದೊಳಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸುವ ಜವಾಬ್ದಾರಿಯಿದೆ.
2. 6ರಿಂದ 14 ವರ್ಷದೊಳಗಿನ ಎಲ್ಲಾ ಮಕ್ಕಳು ಕಡ್ಡಾಯವಾಗಿ ಶಾಲಾ ದಾಖಲಾತಿ ಹೊಂದುವ ಶಾಲೆಗೆ ಹಾಜರಾಗುವ ಮತ್ತು ಕಡ್ಡಾಯವಾಗಿ ಪ್ರಾಥಮಿಕ ಶಾಲಾ ಶಿಕ್ಷಣವನ್ನು ಪೂರೈಸುವುದನ್ನು ಖಾತರಿಗೊಳಿಸುವ ಜವಾಬ್ದಾರಿಯಿದೆ.

**ಸೆಕ್ಷನ್ 9 : ಸ್ಥಳೀಯ ಸರಕಾರದ ಜವಾಬ್ದಾರಿಗಳು**

ಪ್ರತಿಯೊಂದು ಸ್ಥಳೀಯ ಪ್ರಾಧಿಕಾರವು –

1. ಪ್ರತಿಯೊಂದು ಮಗುವಿಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸತಕ್ಕದ್ದು. ಸಂದರ್ಭಾನುಸಾರ ಮಗುವಿನ ತಂದೆ-ತಾಯಿ ಅಥವಾ ಪೋಷಕರು, ಸಮುಚಿತ ಸರ್ಕಾರವು ಅಥವಾ ಸ್ಥಳೀಯ ಪ್ರಾಧಿಕಾರವು ಸ್ಥಾಪಿಸಿರುವ, ಒಡೆತನ ಹೊಂದಿರುವ, ನಿಯಂತ್ರಣ ಹೊಂದಿರುವ ಅಥವಾ ಸಮುಚಿತ ಸರ್ಕಾರವು ಅಥವಾ ಸ್ಥಳೀಯ ಪ್ರಾಧಿಕಾರವು ನೇರವಾಗಿ ಅಥವಾ ಪರೋಕ್ಷವಾಗಿ ಒದಗಿಸಿದ ನಿಧಿಗಳಿಂದ ಗಣನೀಯವಾಗಿ ಹಣಕಾಸು ನೆರವನ್ನು ಪಡೆದಿರುವಂಥ ಶಾಲೆಯಲ್ಲದ ಒಂದು ಶಾಲೆಗೆ ತಮ್ಮ ಮಗುವನ್ನು ಸೇರಿಸಿದ್ದಲ್ಲಿ, ಸಂಧರ್ಭಾನುಸಾರ, ಆ ಮಗುವು ಅಥವಾ ಅದರ ತಂದೆ – ತಾಯಿಯು ಅಥವಾ ಪೋಷಕರು ಅಂತಹ ಇತರ ಶಾಲೆಯಲ್ಲಿ ಮಗುವಿನ ಪ್ರಾಥಮಿಕ ಶಿಕ್ಷಣಕ್ಕಾಗಿ ಭರಿಸಿದ ವೆಚ್ಚವನ್ನು ತುಂಬಿಕೊಂಡು ಕ್ಲೇಮು ಮಾಡಲು ಹಕ್ಕುಳ್ಳವರಾಗಿರತಕ್ಕದ್ದಲ್ಲ.

2. ಸ್ಥಳೀಯ ಸರಕಾರವು ಹತ್ತಿರದಲ್ಲೇ ಶಾಲೆಯು ಇರುವಂತೆ ಖಚಿತಪಡಿಸಿಕೊಳ್ಳತಕ್ಕದ್ದು (ಪ್ರಕರಣ–6) ಪ್ರಕರಣ 6ರ ಪ್ರಕಾರ ಸ್ಥಳೀಯ ಸರಕಾರವು ಹತ್ತಿರದಲ್ಲಿ ಶಾಲೆ ಇರದಿದ್ದರೆ, ಮೂರು ವರ್ಷದ ಅವಧಿಯೊಳಗಾಗಿ ಒಂದು ಶಾಲೆಯನ್ನು ಸ್ಥಾಪಿಸತಕ್ಕದ್ದು.

3. ದುರ್ಬಲ ವರ್ಗಕ್ಕೆ ಸೇರಿದ ಮಗುವಿಗೆ ಮತ್ತು ಅನುಕೂಲ ವಂಚಿತ ಗುಂಪಿಗೆ ಸೇರಿದ ಮಗುವಿಗೆ ಯಾವುದೇ ಕಾರಣಗಳಿಂದ ತಾರತಮ್ಯ ಮಾಡುತ್ತಿಲ್ಲ ಮತ್ತು ಆ ಮಗು ಪ್ರಾಥಮಿಕ ಶಿಕ್ಷಣವನ್ನು ಮುಂದುವರಿಸುವುದಕ್ಕೆ ಮತ್ತು ಅದನ್ನು ಪೂರ್ಣಗೊಳಿಸುವುದಕ್ಕೆ ಅಡ್ಡಿ ಮಾಡುತ್ತಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

   ಸ್ಥಳೀಯ ಸರಕಾರವು ದುರ್ಬಲ ವರ್ಗಕ್ಕೆ ಸೇರಿದ ಮಗುವಿಗೆ ಮತ್ತು ಅನುಕೂಲ ವಂಚಿತ ಗುಂಪಿಗೆ ಸೇರಿದ ಮಗುವಿಗೆ ಹೆಚ್ಚಿನ ಒತ್ತುಕೊಡುವ ನಿಟ್ಟಿನಲ್ಲಿ ಸ್ಥಳೀಯ ಸರಕಾರವು ದುರ್ಬಲ ವರ್ಗದ ಮಕ್ಕಳಿಗೆ ಪ್ರತ್ಯೇಕ ಕ್ರಿಯಾ ಯೋಜನೆಯನ್ನು ತಯಾರಿಸಿ ಅನುದಾನ ಹಂಚಿಕೆ ಮಾಡಿ ಅನುಷ್ಠಾನ ಮಾಡುವಲ್ಲಿ ಕ್ರಮ ಕೈಗೊಳ್ಳಬೇಕು. ಮತ್ತು ದುರ್ಬಲ ವರ್ಗದ ಎಲ್ಲಾ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವಲ್ಲಿ ಕ್ರಮ ಕೈಗೊಳ್ಳಬೇಕು.

4. ತನ್ನ ಅಧಿಕಾರ ವ್ಯಾಪ್ತಿಯ ಪ್ರದೇಶದಲ್ಲಿ ವಾಸಿಸುತ್ತಿರುವ 14 ವರ್ಷ ವಯಸ್ಸಿನವರೆಗಿನ ಮಕ್ಕಳ ದಾಖಲೆಯನ್ನು ನಿಯಮಿಸಬಹುದಾದಂತಹ ರೀತಿಯಲ್ಲಿ ನಿರ್ವಹಿಸತಕ್ಕದ್ದು.

5. ತನ್ನ ವ್ಯಾಪ್ತಿಯ ಪ್ರದೇಶದಲ್ಲಿ ವಾಸಿಸುತ್ತಿರುವ ಪ್ರತಿಯೊಂದು ಮಗುವೂ ಪ್ರಾಥಮಿಕ ಶಿಕ್ಷಣಕ್ಕೆ ಸೇರುವಂತೆ, ಹಾಜರಾಗುವಂತೆ ಮತ್ತು ಅದನ್ನು ಪೂರ್ಣಗೊಳಿಸುವಂತೆ ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ಆ ಬಗ್ಗೆ ಮೇಲ್ವಿಚಾರಣೆ ಮಾಡತಕ್ಕದ್ದು.

6. ಶಾಲಾ ಕಟ್ಟಡ, ಭೋಧನಾ ಸಿಬ್ಬಂಧಿ ಮತ್ತು ಕಲಿಕಾ ಸಾಮಗ್ರಿ ಸೇರಿದಂತೆ ಮೂಲ ಸೌಕರ್ಯಗಳನ್ನು ಒದಗಿಸತಕ್ಕದ್ದು.

7. 4ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ವಿಶೇಷ ತರಬೇತಿ ಸೌಲಭ್ಯವನ್ನು ಒದಗಿಸತಕ್ಕದ್ದು.

   ಅಂದರೆ, ಆರು ವರ್ಷಕ್ಕೂ ಮೇಲ್ಪಟ್ಟ ವಯಸ್ಸಿನ ಮಗುವನ್ನು ಯಾವುದೇ ಶಾಲೆಗೆ ಸೇರಿಸದೇ ಇರುವಲ್ಲಿ ಅಥವಾ ಸೇರಿಸಿದ್ದರೂ ಅವನು ಅಥವಾ ಅವಳು ತನ್ನ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಲಾಗದಿದ್ದಾಗ, ಅವನ ಅಥವಾ ಅವಳ ವಯಸ್ಸಿಗನುಗುಣವಾಗಿ ಸೂಕ್ತ ತರಗತಿಗೆ ಅವನನ್ನು ಅಥವಾ ಅವಳನ್ನು ಸೇರಿಸಿಕೊಳ್ಳತಕ್ಕದ್ದು. ಮತ್ತು ಮಗುವನ್ನು ಅವನ ಅಥವಾ ಅವಳ ವಯಸ್ಸಿಗನುಗುಣವಾಗಿ ಸೂಕ್ತ ತರಗತಿಗೆ ನೇರವಾಗಿ ಸೇರಿಸಿಕೊಂಡಿರುವಲ್ಲಿ ಆ ಮಗುವನ್ನು ಕಲಿಕೆಯಲ್ಲಿ ಸಹಪಾಠಿಗಳ ಸಮಕ್ಕೆ ತರುವ ಸಲುವಾಗಿ ನಿಯಮಿಸಬಹುದಾದಂತ ರೀತಿಯಲ್ಲಿ ಮತ್ತು ಅಂಥ ಕಾಲಮಿತಿಯೊಳಗೆ ವಿಶೇಷ ತರಬೇತಿ ಪಡೆಯುವ ಹಕ್ಕನ್ನು ಅದು ಹೊಂದಿರತಕ್ಕದ್ದು. ಪ್ರಾಥಮಿಕ ಶಿಕ್ಷಣಕ್ಕಾಗಿ ಹಾಗೆ ಸೇರಿಸಲಾದ ಮಗುವು 14ವರ್ಷ ವಯಸ್ಸಿನ ನಂತರವೂ, ಪ್ರಾಥಮಿಕ ಶಿಕ್ಷಣ ಪೂರೈಸುವವರೆಗೆ ಉಚಿತ ಶಿಕ್ಷಣ ಪಡೆಯಲು ಹಕ್ಕು ಹೊಂದಿರತಕ್ಕದ್ದು.

8. ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಮಾನಕ ಗುಣಮಟ್ಟಗಳಿಗೆ ಮತ್ತು ಪ್ರಮಾಣಕಗಳಿಗೆ ಅನುಗುಣವಾಗಿ ಉತ್ತಮ ಗುಣಮಟ್ಟದ ಪ್ರಾಥಮಿಕ ಶಿಕ್ಷಣ ದೊರೆಯುವಂತೆ ಖಚಿತಪಡಿಸಿಕೊಳ್ಳತಕ್ಕದ್ದು.

9. ಪ್ರಾಥಮಿಕ ಶಿಕ್ಷಣಕ್ಕಾಗಿ ಪಠ್ಯಕ್ರಮವನ್ನು ಮತ್ತು ವ್ಯಾಸಂಗ ಕ್ರಮಗಳನ್ನು ಸಕಾಲದಲ್ಲಿ ನಿಯಮಿಸುವಂತೆ ಖಚಿತಪಡಿಸಿಕೊಳ್ಳತಕ್ಕದ್ದು.

10. ಶಿಕ್ಷಕರಿಗೆ ತರಬೇತಿ ಸೌಲಭ್ಯವನ್ನು ಒದಗಿಸಕ್ಕದ್ದು.

11. ವಲಸೆ ಬಂದ ಕುಟುಂಬಗಳ ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳುವುದನ್ನು ಖಚಿತಪಡಿಸಿ ಕೊಳ್ಳತಕ್ಕದ್ದು.

12. ತನ್ನ ಅಧಿಕಾರ ವ್ಯಾಪ್ತಿಯ ಪ್ರದೇಶದಲ್ಲಿ ಶಾಲೆಗಳ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ ಮಾಡತಕ್ಕದ್ದು.

13. ಶೈಕ್ಷಣಿಕ ವರ್ಷದ ಕ್ಯಾಲೆಂಡರನ್ನು ನಿರ್ಧರಿಸತಕ್ಕದ್ದು.

**ಸೆಕ್ಷನ್ 10: ಪೋಷಕರು ಮತ್ತು ತಂದೆ ತಾಯಿಯರ ಕರ್ತವ್ಯ**

ತಮ್ಮ ಮಕ್ಕಳನ್ನು ಅಥವಾ ತಮ್ಮ ಸಂರಕ್ಷಣೆಯಲ್ಲಿರುವ ಎಲ್ಲಾ ಮಕ್ಕಳನ್ನು ತನ್ನ ನೆರೆಹೊರೆಯಲ್ಲಿರಬಹುದಾದ ಪ್ರಾಥಮಿಕ ಶಿಕ್ಷಣಕ್ಕಾಗಿ ಶಾಲೆಗೆ ದಾಖಲಿಸುವುದು ಎಲ್ಲಾ ತಂದೆ ತಾಯಿಯರು ಮತ್ತು ಪೋಷಕರ ಕರ್ತವ್ಯ.

**ಸೆಕ್ಷನ್ : 11 ಸಮುಚಿತ ಸರಕಾರಕ್ಕೆ ಪ್ರಾಥಮಿಕ ಪೂರ್ವ ಶಿಕ್ಷಣ ವ್ಯವಸ್ಥೆ ಮಾಡುವ ಜವಾಬ್ದಾರಿ**

3 ವರ್ಷವನ್ನು ದಾಟಿದ ಎಲ್ಲಾ ಮಕ್ಕಳನ್ನು ಮುಂದೆ ಪ್ರಾಥಮಿಕ ಶಿಕ್ಷಣಕ್ಕೆ ಸೇರಿಸಲು ತಯಾರು ಮಾಡುವ ಉದ್ದೇಶದಿಂದ, ಅವರಿಗೆ ಆರಂಭಿಕ ಬಾಲ್ಯ ಪೋಷಣೆ, ಪ್ರಾಥಮಿಕ ಪೂರ್ವ ಶಿಕ್ಷಣವನ್ನು ಎಲ್ಲಾ ಮಕ್ಕಳಿಗೆ ಅವರು 6 ವರ್ಷವನ್ನು ದಾಟುವವರೆಗೆ ಸೂಕ್ತ ಸರಕಾರಗಳು ಉಚಿತವಾಗಿ ಶಾಲಾ ಪೂರ್ವ ಶಿಕ್ಷಣದ ವ್ಯವಸ್ಥೆಗಳ ಮೂಲಕ ಮಾಡಿಕೊಡಬಹುದು.

**ಸೆಕ್ಷನ್ 12: ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸಲು ಶಾಲೆಗಿರುವ ಜವಾಬ್ದಾರಿಯ ವ್ಯಾಪ್ತಿ.**

ಬಿ) ಸೆಕ್ಷನ್ 2 ಉಪ–ಕ್ಲಾಸ್ (n)ರಲ್ಲಿ ನಿರ್ದಿಷ್ಟಪಡಿಸಿರುವಂತೆ, ಪ್ರತಿ ವರ್ಷ ತನಗೆ ಸಿಗುವ ದೇಣಿಗೆ/ಗ್ರ್ಯಾಂಟ್/ಏಯ್ಡ್ ನ ಪ್ರಮಾಣದಂತೆ ತನ್ನಲ್ಲಿ ಪ್ರವೇಶ ಪಡೆಯುವ ಒಟ್ಟು ಮಕ್ಕಳಲ್ಲಿ ಕನಿಷ್ಠ ಪ್ರತಿ ಶತ 25 ಒಳಪಟ್ಟು ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸಬೇಕು.

ಸೆಕ್ಷನ್ 2ಕ್ಲಾಸ್ (ಟಿ) ರ ಪ್ರಕಾರ ಉಪಕ್ಲಾಸ್ (3) ಮತ್ತು (4)ರಲ್ಲಿ ನಿರ್ದಿಷ್ಟಪಡಿಸಿರುವಂತೆ, ತನ್ನ ನೆರೆಹೊರೆಯವರಿಗೆ ಕನಿಷ್ಠ ಪ್ರತಿಶತ 25ರಷ್ಟು ದುರ್ಬಲ ವರ್ಗಗಳು ಮತ್ತು ಪ್ರತಿಕೂಲ ಪರಿಸ್ಥಿತಿಯಲ್ಲಿರುವ ವರ್ಗಗಳ ಮಕ್ಕಳನ್ನು 1ನೇ ತರಗತಿಗೆ ಸೇರಿಸಿಕೊಂಡು ಅವರಿಗೆ ಪ್ರಾಥಮಿಕ ಶಿಕ್ಷಣ ಪೂರೈಸುವವರೆಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸಬೇಕು.

**ಸೆಕ್ಷನ್13: ಶಾಲೆಗೆ ಪ್ರವೇಶ ಪಡೆಯಲು ಕ್ಯಾಪಿಟೇಶನ್ ಶುಲ್ಕ ಮತ್ತು ಪ್ರವೇಶ ಪರೀಕ್ಷೆ ಇರಬಾರದು.**

ಸೆಕ್ಷನ್ 13–2ರಲ್ಲಿ (a) ಕ್ಯಾಪಿಟೇಶನ್ ಶುಲ್ಕವನ್ನು ತೆಗೆದುಕೊಂಡಿದ್ದೇ ಆದಲ್ಲಿ ಆ ಶುಲ್ಕದ 10ರಷ್ಟು ಪ್ರಮಾಣದಲ್ಲಿ ದಂಡವನ್ನು ತೆರಬೇಕಾಗುತ್ತದೆ.

ಬಿ) ಮಕ್ಕಳನ್ನು ಪ್ರವೇಶ ಪರೀಕ್ಷೆಯಂತಹದಕ್ಕೆ ಒಳಪಡಿಸಿದ್ದೇ ಆದಲ್ಲಿ ಮೊದಲ ಬಾರಿ ರೂ. 25000 ಮತ್ತು ಅದನ್ನು ಮತ್ತೆ ಮತ್ತೆ ಮೀರಿದಲ್ಲಿ ಪ್ರತೀ ಬಾರಿ ರೂ. 50,000ವನ್ನು ತೆರಬೇಕಾಗುತ್ತದೆ.

**ಸೆಕ್ಷನ್ 14: ಪ್ರವೇಶ ಪಡೆಯಲು ವಯಸ್ಸಿನ ಪುರಾವೆ:**

2) ಮಗುವಿನ ವಯಸ್ಸನ್ನು ನಿರ್ಧರಿಸುವ ಪ್ರಮಾಣ ಪತ್ರಗಳು ಇಲ್ಲವೆಂಬ ಒಂದೇ ಕಾರಣಕ್ಕೆ ಯಾವುದೇ ಮಗುವಿಗೆ ಶಾಲಾ ಪ್ರವೇಶವನ್ನು ನಿರಾಕರಿಸುವಂತಿಲ್ಲ.

**ಸೆಕ್ಷನ್ 15: ಪ್ರವೇಶವನ್ನು ನಿರಾಕರಿಸುವಂತಿಲ್ಲ: ಮಗುವನ್ನು ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಅಥವಾ ನಿಯಮಿಸಬಹುದಾದಂತೆ ವಿಸ್ತರಿಸಿದ ಅಂತಹ ಅವಧಿಯೊಳಗೆ ಶಾಲೆಗೆ ಸೇರಿಸಿಕೊಳ್ಳತಕ್ಕದ್ದು.**

**ಸೆಕ್ಷನ್ 16: ತಡೆ ಹೇರುವುದು ಮತ್ತು ಹೊರಹಾಕುವುದಕ್ಕೆ ನಿಷೇಧ:**

ಯಾವುದೇ ಮಗುವನ್ನು ಯಾವುದೇ ಕಾರಣಕ್ಕೂ ಯಾವುದೇ ತರಗತಿಯಲ್ಲಿ ತಡೆದಿರಿಸತಕ್ಕದಲ್ಲ ಅಥವಾ ಶಾಲೆಯಿಂದ ಹೊರಹಾಕತಕ್ಕದ್ದಲ್ಲ.

**ಸೆಕ್ಷನ್ 17: ದೈಹಿಕ ಶಿಕ್ಷೆ ಮತ್ತು ಮಾನಸಿಕ ಕಿರುಕುಳ ನೀಡುವುದಕ್ಕೆ ನಿಷೇಧ:**

1) ಯಾವುದೇ ಮಗುವನ್ನು ದೈಹಿಕ ಶಿಕ್ಷೆ ಅಥವಾ ಮಾನಸಿಕ ಕಿರುಕುಳಕ್ಕೆ ಗುರಿ ಮಾಡಬಾರದು.

**ಸೆಕ್ಷನ್ 18: ಮಾನ್ಯತಾ ಪ್ರಮಾಣ ಪತ್ರವನ್ನು ಪಡೆಯದೆ ಯಾವುದೇ ಶಾಲೆಯನ್ನು ಸ್ಥಾಪಿಸತಕ್ಕದಲ್ಲ.**

**ಸೆಕ್ಷನ್ 19: ಶಾಲೆಗಳನ್ನು ನಡೆಸಲು ಕನಿಷ್ಠ ಮಾಪಕಗಳು ಮತ್ತು ನಿಯಮಗಳು**

2) ಈ ಕಾಯಿದೆಯು ಜಾರಿಯಾಗುವುದಕ್ಕೆ ಮೊದಲೇ ಯಾರಾದರೂ ಶಾಲೆಗಳನ್ನು ಆರಂಭಿಸಿದಲ್ಲಿ, ಅಂತಹ ಶಾಲೆಗಳು ಈ ಕಾಯಿದೆ ಜಾರಿಗೆ ಬಂದ ಮೂರು ವರ್ಷಗಳೊಳಗೆ ತಮ್ಮದೇ ಖರ್ಚಿನಲ್ಲಿ ಈ

ಕಾಯಿದೆಯ ಶೆಡ್ಯೂಲಿನಲ್ಲಿ ಇರುವ ನಿಯಮಗಳು, ಮಾಪಕಗಳಿಗೆ ಸೂಕ್ತವಾಗಿ ಶಾಲೆಗಳಲ್ಲಿ ವ್ಯವಸ್ಥೆಗಳನ್ನು ಮಾಡಬೇಕು.

4) ಸೆಕ್ಷನ್ (3)ರಂತೆ ಯಾವುದಾದರೂ ಶಾಲೆಗೆ ಮನ್ನಣೆಯನ್ನು ಹಿಂದಕ್ಕೆ ತೆಗೆದುಕೊಂಡು ದಿನದಿಂದ ಅಂತಹ ಶಾಲೆಗಳು ಮುಂದುವರಿಯಬಾರದು.

5) ಹೀಗೆ ಮನ್ನಣೆಯನ್ನು ಹಿಂದಕ್ಕೆ ತೆಗೆದುಕೊಂಡು ಮೇಲೂ ಯಾರಾದರೂ ಶಾಲೆಯನ್ನು ಮುಂದುವರಿಸಿದರೆ ಅವರಿಗೆ ರೂ. 1 ಲಕ್ಷದ ತನಕ ಜುಲ್ಮಾನೆಯನ್ನು ವಿಧಿಸಬಹುದು ಮತ್ತು ಅನಂತರವೂ ಶಾಲೆಯನ್ನು ನಡೆಸಿದರೆ ನಿಷೇಧವನ್ನು ಮುರಿದು ಮುಂದುವರೆಯುವ ಪ್ರತಿ ದಿನಕ್ಕೆ ರೂ. 10,000 ದಂಡವನ್ನು ವಿದಿಸಬಹುದು.

**ಸೆಕ್ಷನ್21: ಶಾಲಾ ಆಡಳಿತ ಸಮಿತಿ:**

1. 2ನೇ ಪ್ರಕರಣದ (ಎನ್)ಖಂಡದ (4)ನೇ ಉಪ-ಖಂಡದಲ್ಲಿ ನಿರ್ದಿಷ್ಟಪಡಿಸಿದ ಶಾಲೆಯಾಗಿರುವ ಒಂದು ಶಾಲೆಯು, ಸ್ಥಳೀಯ ಪ್ರಾಧಿಕಾರದ ಚುನಾಯಿತ ಪ್ರತಿನಿಧಿಗಳನ್ನು, ಅಂತಹ ಶಾಲೆಯಲ್ಲಿ ಪ್ರವೇಶ ಪಡೆದ ಮಕ್ಕಳ ತಂದೆ - ತಾಯಿಯನ್ನು ಅಥವಾ ಪೋಷಕರನ್ನು ಮತ್ತು ಶಿಕ್ಷಕರನ್ನು ಒಳಗೊಂಡಿರುವ ಶಾಲಾ ಆಡಳಿತ ಸಮಿತಿಯನ್ನು ರಚಿಸತಕ್ಕದ್ದು. ಅಚಿದರೆ, ಅಂತಹ ಸಮಿತಿಯ ಸದಸ್ಯರಲ್ಲಿ ಕನಿಷ್ಠ ನಾಲ್ಕನೇ ಮೂರರಷ್ಟು ಸದಸ್ಯರು ತಂದೆ-ತಾಯಿ ಅಥವಾ ಪೋಷಕರಾಗಿರತಕ್ಕದ್ದು. ಮತ್ತು ಅನುಕೂಲ ವಂಚಿತ ಗುಂಪಿಗೆ ಹಾಗೂ ದುರ್ಬಲ ವರ್ಗಕ್ಕೆ ಸೇರಿದ ಮಕ್ಕಳ ತಂದೆ-ತಾಯಿಯರಿಗೆ ಅಥವಾ ಪೋಷಕರಿಗೆ ಪ್ರಮಾಣಾನುಸಾರ ಪ್ರಾತಿನಿದ್ಯ ನೀಡತಕ್ಕದ್ದು. ಮತ್ತು ಅಂತ ಸಮಿತಿಯ ಸದಸ್ಯರಲ್ಲಿ ಶೇಕಡಾ 50ರಷ್ಟು ಸದಸ್ಯರು ಮಹಿಳೆಯರಾಗಿರತಕ್ಕದ್ದು.

2.ಶಾಲಾ ಆಡಳಿತ ಸಮಿತಿಯು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ:

a. ಶಾಲೆಯ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ ಮಾಡುವುದು.

b. ಶಾಲಾ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವುದು ಮತ್ತು ಶಿಫಾರಸು ಮಾಡುವುದು.

c. ಸಮುಚಿತ ಸರ್ಕಾರದಿಂದ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಅಥವಾ ಯಾವುದೇ ಇತರ ಮೂಲದಿಂದ ಸ್ವೀಕರಿಸಿದ ಅನುದಾನಗಳ ಬಳಕೆಯ ಮೇಲ್ವಿಚಾರಣೆ ಮಾಡುವುದು ಮತ್ತು

d. ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು.

**ಸೆಕ್ಷನ್ 23: ಶಿಕ್ಷಕರ ನೇಮಕಕ್ಕೆ ಶೈಕ್ಷಣಿಕ ಸಾಮರ್ಥ್ಯಗಳು ಮತ್ತು ಶಿಕ್ಷಕರ ಸೇವಾ ನಿಯಮಗಳು ಮತ್ತು ಷರತ್ತುಗಳು**

1) ಕೇಂದ್ರ ಸರಕಾರವು ಪ್ರಕಟಣೆ ಹೊರಡಿಸಿ ಅಧಿಕೃತಗೊಳಿಸುವ ಶೈಕ್ಷಣಿಕ ಪ್ರಾಧಿಕಾರವು ನಿಗದಿಪಡಿಸುವ ಕನಿಷ್ಠ ಅರ್ಹತೆಗಳನ್ನು ಹೊಂದಿರುವ ವ್ಯಕ್ತಿಗಳು ಶಿಕ್ಷಕರಾಗಿ ನೇಮಕ ಹೊಂದಲು ಅರ್ಹರಾಗುತ್ತಾರೆ.

**2) ಸೆಕ್ಷನ್ 24:** 1) ಸೆಕ್ಷನ್ 23ರ ಉಪ ಸೆಕ್ಷನ್ (1)ರಂತೆ ನೇಮಿಸಲ್ಪಟ್ಟ ಶಿಕ್ಷಕರು ಈ ಮುಂದಿನ ಕರ್ತವ್ಯಗಳನ್ನು ನಿರ್ವಹಿಸಬೇಕು.

(ಎ) ಶಾಲೆಗೆ ತಪ್ಪದೆ ಹಾಜರಾಗುವುದು ಮತ್ತು ಸಮಯ ಪಾಲನೆ ಮಾಡುವುದು.

(ಬಿ) ಸೆಕ್ಷನ್ 29ರ ಸಬ್ ಸೆಕ್ಷನ್ 2ರಲ್ಲಿ ಸೂಚಿಸಿರುವಂತೆ ಶಾಲಾ ಪಠ್ಯವನ್ನು ನಡೆಸಿ ಪೂರ್ತಿಗೊಳಿಸುವುದು.

(ಸಿ) ನಿರ್ದಿಷ್ಟಪಡಿಸಿದ ಸಮಯದೊಳಗೆ ಅಧ್ಯಯನ ವಿಚಾರಗಳನ್ನು ಪೂರ್ಣಗೊಳಿಸುವುದು.

(ಡಿ) ಪ್ರತಿಯೊಬ್ಬ ಮಗುವಿನ ಕಲಿಯುವ ಸಾಮರ್ಥ್ಯವನ್ನು ಪರಿಶೀಲಿಸಿ ಅದರಂತೆ ಅವಶ್ಯಕತೆ ಇರುವ ಹೆಚ್ಚಿನ ಸಹಾಯ ನಿರ್ದೇಶನಗಳನ್ನು ನೀಡುವುದು.

(ಇ) ಪೋಷಕರು ಮತ್ತು ತಂದೆ ತಾಯಿಯರೊಡನೇ ಕ್ರಮಬದ್ಧವಾಗಿ ಸಭೆ ನಡೆಸಿ, ಅವರ ಮಕ್ಕಳು ನಿಯಮಿತವಾಗಿ ಶಾಲೆಗೆ ಹಾಜರಾಗುವ, ಕಲಿಯುವ ಸಾಮರ್ಥ್ಯ ಕಲಿಯುವುದರಲ್ಲಿ ಮಾಡಿರುವ ಪ್ರಗತಿ ಮತ್ತು ಇನ್ನಿತರ ಸೂಕ್ತವಾದ ಮಾಹಿತಿಗಳನ್ನು ಹಂಚಿಕೊಳ್ಳಬೇಕು.

(ಎಫ್) ನಿರ್ದಿಷ್ಟಪಡಿಸಬಹುದಾದ ಇನ್ನಿತರ ಚಟುವಟಿಕೆಗಳು ಮತ್ತು ಕೆಲಸಗಳು ಮಾಡುವುದು.

3) ಶಿಕ್ಷಕರಿಗೆ ಯಾವುದಾದರೂ ನೋವು/ಅಸಮಾಧಾನ ಇದ್ದಲ್ಲಿ ಅದನ್ನು ನಿರ್ದಿಷ್ಟಪಡಿಸಲಾಗುವ ರೀತಿಯಲ್ಲಿ ಪರಿಹರಿಸಿಕೊಳ್ಳಬಹುದು.

**ಸೆಕ್ಷನ್ 25 : ವಿದ್ಯಾರ್ಥಿ ಮತ್ತು ಶಿಕ್ಷಕರ ಅನುಪಾತ:**

(1) ಈಕಾಯಿದೆಯು ಜಾರಿಗೆ ಬಂದ 6 ತಿಂಗಳೊಳಗೆ ಸೂಕ್ತ ಸರಕಾರಗಳು ಮತ್ತು ಸ್ಥಳೀಯ ಸರಕಾರಗಳು ಶೆಡ್ಯೂಲ್ ನಲ್ಲಿ ಸ್ಪಷ್ಟಪಡಿಸಿ ಸೂಚಿರುವಂತೆ ಪ್ರತೀ ಶಾಲೆಯಲ್ಲಿ ಶಿಕ್ಷಕ–ವಿದ್ಯಾರ್ಥಿ ಅನುಪಾತವನ್ನು ಖಾತರಿಪಡಿಸಿಕೊಳ್ಳಬೇಕು.

(2) ವಿದ್ಯಾರ್ಥಿ – ಶಿಕ್ಷಕ ಅನುಪಾತವನ್ನು ಉಪಸೆಕ್ಷನ್ (1) ರಂತೆ ಖಾತರಿ ಪಡಿಸಲು. ಸೆಕ್ಷನ್ 27ರಲ್ಲಿ ಸೂಚಿಸಿರುವಂತೆ ಯಾವುದೇ ಶಿಕ್ಷಕರನ್ನು ಶಾಲೆಯದಲ್ಲದ ಯಾವುದೇ ಕೆಲಸಕ್ಕಾಗಲೀ ಅಥವಾ ಇನ್ನಾವುದೇ ರೀತಿಯ ಶೈಕ್ಷಣಿಕವಲ್ಲದ ಕೆಲಸಗಳಿಗೆ ನೇಮಿಸಿಕೊಳ್ಳಬಾರದು.

**ಸೆಕ್ಷನ್ 29: ಪಠ್ಯಕ್ರಮ ಮತ್ತು ಮೌಲ್ಯಮಾಪನ ಪ್ರಕ್ರಿಯೆಗಳು**

(1) ಪ್ರಾಥಮಿಕ ಶಿಕ್ಷಣದ ಪಠ್ಯ ಮತ್ತು ಮೌಲ್ಯಮಾಪನದ ಪ್ರಕ್ರಿಯೆಯನ್ನು ಸರಕಾರ ಅಧೀಕೃತವಾಗಿ ಪ್ರಕಟಿಸಿದ ಶೈಕ್ಷಣಿಕ ಪ್ರಾಧಿಕಾರವು ನಿರ್ಧರಿಸುತ್ತದೆ.

(2) ಶೈಕ್ಷಣಿಕ ಪ್ರಾಧಿಕಾರವು ಉಪಸೆಕ್ಷನ್ (1) ರ ಪ್ರಕಾರ ಪಠ್ಯ ಮತ್ತು ಮೌಲ್ಯಮಾಪನ ಪ್ರಕ್ರಿಯೆಗಳ ವಿಧಿವಿಧಾನಗಳನ್ನು ನಿರ್ಮಿಸುವಾಗ ಈ ಕೆಳಗಿನವುಗಳನ್ನು ಗಣನೆಗೆ ತೆಗೆದುಕೊಳ್ಳಲೇಬೇಕು.

ಎ) ಸಂವಿಧಾನವು ಎತ್ತಿ ಹಿಡಿದಿರುವ ಮೌಲ್ಯಗಳಿಗೆ ಅನುಗುಣವಾಗಿರಬೇಕು.

ಬಿ) ಮಕ್ಕಳ ಸರ್ವಾಂಗೀಣ ಅಭಿವೃದ್ಧಿ

ಸಿ) ಮಕ್ಕಳ ಜ್ಞಾನ, ಸಾಮರ್ಥ್ಯ ಮತ್ತು ನೈಪುಣ್ಯತೆಗಳ ಬೆಳವಣಿಗೆ

ಡಿ) ಪೂರ್ಣ ಪ್ರಮಾಣದ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯಗಳ ಬೆಳವಣಿಗೆ

ಇ) ಮಕ್ಕಳ ಸ್ನೇಹಿ ಮತ್ತು ಮಕ್ಕಳ ಕೇಂದ್ರೀಕೃತ ಮಾದರಿಯಲ್ಲಿ ಚಟುವಟಿಕೆಗಳ ಮೂಲಕ ಪರಿಶೋಧನೆ ಮತ್ತು ಕಂಡುಕೊಳ್ಳುವ ವಿಧಾನದಲ್ಲಿ ಕಲಿಕೆ.

ಎಫ್) ಬೋಧನಾ ಮಾಧ್ಯಮ ಸಾಧ್ಯವಾದಷ್ಟು ಮಟ್ಟಿಗೆ ಮಕ್ಕಳ ಮಾತೃ ಭಾಷೆಯಲ್ಲಿರಬೇಕು.

ಜಿ) ಮಕ್ಕಳ ಭೀತಿ, ನೋವು, ಮಾನಸಿಕ ಕ್ಷೋಭೆಯಿಂದ ಮುಕ್ತರನ್ನಾಗಿ ಮಾಡುವುದು ಮತ್ತು ಮಕ್ಕಳು ತಮ್ಮ ಅಭಿಪ್ರಾಯವನ್ನು ಮುಕ್ತವಾಗಿ ವ್ಯಕ್ತಪಡಿಸಲು ಸಹಾಯ ಮಾಡುವುದು.

ಎಚ್) ಮಗುವಿನ ಗ್ರಹಿಕೆಯ ಮಟ್ಟ ಮತ್ತು ಅದನ್ನು ಅಳವಡಿಸುವ ಸಾಮರ್ಥ್ಯ ಕುರಿತು ಸಮಗ್ರ ಮತ್ತು ನಿರಂತರ ಮೌಲ್ಯಮಾಪನ.

**ಸೆಕ್ಷನ್ 30: ಪರೀಕ್ಷೆ ಮತ್ತು ಪೂರೈಸಿದ ಪ್ರಮಾಣ ಪತ್ರ:**

1. ಯಾವುದೇ ಮಗು ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವ ತನಕ ಯಾವುದೇ ಬೋರ್ಡ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕಾದ ಅವಶ್ಯಕತೆ ಇಲ್ಲ.
2. ಪ್ರಾಥಮಿಕ ಶಿಕ್ಷಣವನ್ನು ಪೂರೈಸಿದ ಪ್ರತೀ ಮಗುವಿಗೂ ಪೂರ್ವನಿರ್ಧಾರಿತ ರೂಪ ಮತ್ತು ಮಾದರಿಯಲ್ಲಿ ಪ್ರಮಾಣ ಪತ್ರ ನೀಡಬೇಕು.

**ಸೆಕ್ಷನ್ 31: ಮಕ್ಕಳ ಶಿಕ್ಷಣದ ಹಕ್ಕಿನ ಉಸ್ತುವಾರಿ.**

1) ಬಿ) ಮಕ್ಕಳ ಹಕ್ಕುಗಳ ಉಚಿತ ಮತ್ತು ಸಾರ್ವತ್ರಿಕ ಶಿಕ್ಷಣದ ಕುರಿತಂತಹ ದೂರುಗಳ ವಿಚಾರಣೆ

2) ಮೇಲೆ ಹೇಳಿದ ಆಯೋಗವು ಉಪ ಸೆಕ್ಷನ್ 1ರ ಕ್ಲಾಸ್ (ಸಿ) ಅಡಿಯಲ್ಲಿ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿಗೆ ಸಂಬಂಧಿಸಿದ ಯಾವುದಾದರೂ ವಿಚಾರದ ಬಗ್ಗೆ ತನಿಖೆ ಮಾಡುವಾಗ, ನಿರ್ದಿಷ್ಟವಾದ ಷರತ್ತುಗಳಡಿ ಕೆಲಸ ನಿರ್ವಹಿಸಲು ಸೂಚಿಸಿದ ಪ್ರಾಧಿಕಾರವನ್ನು ನಿರ್ಮಿಸಬೇಕು.

**ವಿ.ಸೂ: (ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿನ ಕಾಯಿದೆಯಲ್ಲಿ 7 ಅಧ್ಯಾಯಗಳಿದ್ದು 37ಸೆಕ್ಷನ್‌ಗಳಲ್ಲಿ ವಿವರಿಸಲಾಗಿದೆ. ಇಲ್ಲಿ ಕಾಯಿದೆಯ ಕೆಲವು ಮುಖ್ಯವಾದ ಅಂಶಗಳನ್ನು ಮಾತ್ರ ಪ್ರಕಟಿಸಲಾಗಿದೆ. ಇದರಲ್ಲಿರುವ ಕನ್ನಡ ಅವತರಣಿಕೆ ಕೇವಲ ಕಾಯಿದೆಯ ಅನುವಾದಷ್ಟೇ. ಅಧಿಕೃತ ಉಲ್ಲೇಖಗಳನ್ನು ಮೂಲ ಕಾಯಿದೆಯಿಂದಲೆ ನೋಡಬೇಕಾಗಿ ವಿನಂತಿ.)**




ಪಡಿ, "ಗಣೇಶ", 2ನೇ ಅಡ್ಡರಸ್ತೆ, ಲೋವರ್ ಬೆಂದೂರ್,
ಮಂಗಳೂರು – 575 002 ದೂರವಾಣಿ – 0824–2439895

www.padivalored.com

ಸಂಕಷ್ಟದಲ್ಲಿರುವ ಮಕ್ಕಳು ಕಂಡುಬಂದರೆ ಸಂಪರ್ಕಿಸಿ

**1098/112**